PW-2 ರಾಘವೇಂದ್ರ

Date:18.06.2026

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಜಿ ಸಿ ಎಂ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ವಾದಿ ಹಾಗೂ ಕೃಷ್ಣಪ್ರಸಾದ್ ರವರ ಆದಂತಹ ಕರಾರು ಪತ್ರವನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸದರಿ ಪತ್ರವನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ 1 ನೇ ಪ್ರತಿವಾದಿಯ ಮತ್ತು ವಾದಿಯ ಸಹಿಗಳನ್ನು ಈಗಾಗಲೇ ನಿಪಿ 1 ಬಿ ಮತ್ತು 1 ಎ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ನಾನು, ಮಲ್ಲಿಕಾರ್ಜುನ, ರಾಜಣ್ಣ ಮತ್ತು ಪ್ರಕಾಶ್ ರವರು ಸಹಿ ಮಾಡಿದ್ದೇವೆ. ಸಾಕ್ಷಿ ಗುರುತಿಸಿದ ಸದರಿ ಸಹಿಗಳನ್ನು ಈಗಾಗಲೆ ನಿಪಿ 1 ಸಿ ರಿಂದ 1 ಎಫ್ ಎಂದು ಗುರುತಿಸಲಾಗಿದೆ. ಸದರಿ ಪತ್ರವನ್ನು ರುದ್ರಸ್ವಾಮಿ ರವರು ಬರೆದಿರುತ್ತಾರೆ. ಸಾಕ್ಷಿ ಗುರುತಿಸಿದ ರುದ್ರಸ್ವಾಮಿ ರವರ ಸಹಿಯನ್ನು ಈಗಾಗಲೇ ನಿಪಿ 1 ಜಿ ಎಂದು ಗುರುತಿಸಲಾಗಿದೆ. ಸದರಿ ಪತ್ರಕ್ಕೆ ನಾರಾಯಣ ರವರು ಕೂಡ ಸಹಿ ಮಾಡಿರುತ್ತಾರೆ ಸಾಕ್ಷಿ ಗುರುತಿಸಿದ ಸದರಿ ಸಹಿಯನ್ನು ಈಗಾಗಲೇ ನಿಪಿ 1 ಹೆಚ್ ಎಂದು ಗುರುತಿಸಲಾಗಿದೆ.

**ಪಾಟೀ ಸವಾಲಿಗೆ ಪ್ರತಿವಾದಿಗಳ ಪರ ವಕೀಲರು ಕಾಲಾವಕಾಶವನ್ನು ಕೋರಿದ್ದು ಪ್ರತಿವಾದಿಗಳು ವಾದಿಗೆ ಪಾಟೀ ಸವಾಲು ಮಾಡದೆ ಇರುವ ಕಾರಣ, ಕಾಲಾವಕಾಶ ನೀಡಲು ಯಾವುದೇ ಸಮಂಜಸ ಕಾರಣ ಇರುವುದಿಲ್ಲ, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಳ್ಳಕೆರೆ